# ಒಂದನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.

CC No.:-131/2007
C.W.:-11
P.W.:-1

| | | |
|---|---|---|
| ಸಾಕ್ಷಿದಾರರ ಹೆಸರು | : | ಎನ್.ಜಯರಾಜ್ |
| ತಂದೆಯ ಹೆಸರು | ಃ | ಟಿ.ಎನ್.ನರಸಿಂಹಮೂರ್ತಿ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಬಿಬಿಎಂಪಿಯಲ್ಲಿ ಗುಮಾಸ್ತ |
| ಸಾಕೀನ | : | ಬೆಂಗಳೂರು |

ಸಾಕ್ಷಿಗೆ ಈ ದಿನ ದಿಃ 08.01.2020 ರಂದು ಪ್ರಮಾಣ ವಚನ ಬೋಧಿಸಲಾಯಿತು.

ನಾನು 2006 ರಲ್ಲಿ ಹುಣಸೂರಿನಲ್ಲಿ ಫಾರೆಸ್ಟ್ ಸರ್ವೆಯರ್ ಎಂದು ಕೆಲಸ ಮಾಡುತ್ತಿದ್ಧೆ. ದಿಃ18-4-2006 ರಂದು ಸರ್ಕಾರದ ಆದೇಶದ ಪ್ರಕಾರ ನನ್ನನ್ನು ಕನಕಪುರಕ್ಕೆ ನಿಯೋಜಿಸಿರುತ್ತಾರೆ. ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಅದರ ಬಗ್ಗೆ ವರದಿ ನೀಡುವಂತೆ ನಮ್ಮ ಟೀಮ್ ಲೀಡರ್ ರವರಿಗೆ ಆದೇಶವಾಗಿರುತ್ತದೆ. ನಮ್ಮ ಟೀಮ್ ಲೀಡರ್ ರೇಂಜ್ ಆಫಿಸರ್ ನಾಗರಾಜು . ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ರೆವಿನ್ಯೂ ಇಲಾಖೆ, ಅರಣ್ಯ ಇಲಾಖೆಯವರು ಜಂಟಿಯಾಗಿ ಸರ್ವೆ ಕಾರ್ಯ ಮಾಡಿದ್ದು, ಅದರಲ್ಲಿ ನಾನು ಭಾಗವಹಿಸಿರುತ್ತೇನೆ. ನಾವು ಸಿದ್ದರಬೆಟ್ಟ ಕಿರುಅರಣ್ಯಕ್ಕೆ ಹೋಗಿ ಬಿಜ್ಜಹಳ್ಳಿ ಗ್ರಾಮದ ಸರ್ವೆ ನಂ.27 ರಲ್ಲಿ ನಾವು ಸರ್ವೆ ಮಾಡಿರುತ್ತೇವೆ. ಸರ್ವೆ ನಂ.27 ರಲ್ಲಿ ರೆವಿನ್ಯೂ ಮತ್ತು ಅರಣ್ಯ ಭೂಮಿ ಇದ್ದು, ನಾವು ಸರ್ವೆ ಮಾಡಿದ ಜಾಗ ಅರಣ್ಯ ಇಲಾಖೆಗೆ ಸೇರಿದ ಜಾಗ. ಜಂಟಿಯಾಗಿ ನಕ್ಷೆಯನ್ನು ತಯಾರಿಸಿ ನಮ್ಮ ವರದಿಯನ್ನು ನೀಡಿರುತ್ತೇವೆ. ಆರೋಪಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಸದರಿ ಸರ್ವೆ ನಂಬರ್ ನಲ್ಲಿ 4 ಎಕರೆಯನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದರು. ಸದರಿಯವರು ಆ ಜಾಗದಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದರು. ಸದರಿಯವರು ಸದರಿ 4 ಎಕರೆ ಜೊತೆಗೆ 3 ಎಕರೆ ಹೆಚ್ಚುವರಿಯಾಗಿ ಸರ್ವೆ ನಂ.27 ರ ಅರಣ್ಯದ ಜಮೀನಿನಲ್ಲಿ ಒತ್ತುವರಿ ಮಾಡಿದ್ದರು. ಸದರಿ ಹೆಚ್ಚುವರಿ ಗಣಿಗಾರಿಕೆ ಮಾಡಿದ ಜಾಗಕ್ಕೆ ಅವರು ಪರವಾನಿಗೆ ಹೊಂದಿರಲಿಲ್ಲ. ನನಗೆ ದಾಖಲೆಗಳ ಆಧಾರದ ಮೇಲೆ ಚಂದ್ರಕಲಾ ಎನ್ನುವವರು ಗಣಿಗಾರಿಕೆ ಮಾಡುತ್ತಿದ್ದ ಬಗ್ಗೆ ಗೊತ್ತಿದೆ. ನಾನು ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿ ನಾನು ಅವರನ್ನು ವೈಯಕ್ತಿಕವಾಗಿ ನೋಡಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ, ಅದು ತಾವು ಮಾಡಿದ ಜಂಟಿ ಸರ್ವೆಯ ನಕ್ಷೆ ಇದ್ದು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದು ದಿಃ28-4-2006 ರ ಜಂಟಿ ಸರ್ವೆ ನಕ್ಷೆಯಾಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಾವು ಜಂಟಿ ಸರ್ವೆ ಕಾರ್ಯವನ್ನು ನೋಟಿಫಿಕೇಶನ್ ಸಂಖ್ಯೆ ಜಿ6294-ft.177-34-2 ದಿಃ2-3 ಜನವರಿ 1935 ರ ಆಧಾರದ ಮೇಲೆ ಜಂಟಿ ಸರ್ವೆಯನ್ನು ಮಾಡಿರುತ್ತೇವೆ. ಸದರಿ ನೊಟೀಫಿಕೇಶನ ಪ್ರತಿಯನ್ನು ನಿಪಿ-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಹೆಚ್ ಎಲ್ ಎ ವಕೀಲರಿಂದಃ

ಸದರಿ ಸಿದ್ದರಬೆಟ್ಟ ಕಿರುಅರಣ್ಯದ ಒಟ್ಟು ವಿಸ್ತೀರ್ಣ 1,114 ಎಕರೆ. 1144 ಎಕರೆಯಲ್ಲಿ ರೆವಿನ್ಯೂ ಇಲಾಖೆಗೆ ಸದರಿ ಅರಣ್ಯದ ಜಾಗವನ್ನು ಹಸ್ತಾಂತರ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದಿಃ30-4-1959 ರಲ್ಲಿ ಸರ್ಕಾರಿ ಆದೇಶ ಸಂಖ್ಯೆ ಕೆಎಫ್ ಡಿ 159 ಎಫ್ ಎ ಎಫ್ 59 ರಡಿಯಲ್ಲಿ ಬೊಮ್ಮಸಂದ್ರದ ಸರ್ವೆ ನಂ.19 ಮತ್ತು 30 ಹಾಗೂ ಬಿಜ್ಜಹಳ್ಳಿಯ ಸರ್ವೆ ನಂ.27, 28 ಜಮೀನುಗಳು ರೆವಿನ್ಯೂ ಇಲಾಖೆಗೆ ಹಸ್ತಾಂತರವಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಹಸ್ತಾಂತರ ಆದ ನಂತರ 2002-03 ರಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸರ್ವೆ ನಂ.27 ರಲ್ಲಿ ಗಣಿಗಾರಿಕೆಯನ್ನು ನಡೆಸಲು ಪರವಾನಿಗೆ ಕೋರಿ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಅದರ ಪ್ರಕಾರ ಅವರು ಸದರಿ

ಸರ್ವೆ ನಂಬರ್ ಜಮೀನು ರೆವಿನ್ಯೂ ಇಲಾಖೆಗೆ ಬರುತ್ತದೆಂದು ಪರವಾನಿಗೆ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಡಿ ಸಿ ಎಫ್ ಬೆಂಗಳೂರು ಗ್ರಾಮಾಂತರ ರವರು ಸರ್ವೆ ನಂ.27 ರಲ್ಲಿ ಆರೋಪಿಯು ಗಣಿಗಾರಿಕೆ ಮಾಡುತ್ತಿರುವ ಪ್ರದೇಶ ಅರಣ್ಯ ಪ್ರದೇಶಕ್ಕೆ ಸೇರಿರುವುದಿಲ್ಲ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪತ್ರವನ್ನು ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಅದನ್ನೆಲ್ಲಾ ಪರಿಗಣಿಸಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಆರೋಪಿಗೆ ಸರ್ವೆ ನಂ.27 ರಲ್ಲಿ 4 ಎಕರೆ ಜಮೀನಿನಲ್ಲಿ ಗಣಿಗಾರಿಕೆ ಮಾಡಲು ಅವಕಾಶ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ನನಗೆ ಲೀಸ್ ಗೆ ಕೊಟ್ಟಿರುವ ಬಗ್ಗೆ ಮಾತ್ರ ಗೊತ್ತಿದೆ ಎಂದು ನುಡಿಯುತ್ತಾರೆ. ಆರೋಪಿಯು ಅರಣ್ಯ ಪ್ರದೇಶಕ್ಕೆ ಸೇರಿರದ ಜಾಗದಲ್ಲಿ ಸರ್ಕಾರಕ್ಕೆ ರಾಜಧನವನ್ನು ಪಾವತಿಸಿ ಕಾನೂನು ರೀತಿಯ ಗಣಿಗಾರಿಕೆ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಆರೋಪಿಯು ಬೇರೊಬ್ಬರಿಂದ ಕ್ರಯಕ್ಕೆ ಕೊಂಡಂತಹ ಜಮೀನಿನಲ್ಲಿ ಗಣಿಗಾರಿಕೆ ಮಾಡುತ್ತಿದ್ದರೇ ವಿನಃ ಯಾವುದೇ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿ ಗಣಿಗಾರಿಕೆ ನಡೆಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ 7 ಎಕರೆ ಸಂಪೂರ್ಣವಾಗಿ ಅರಣ್ಯ ಪ್ರದೇಶಕ್ಕೆ ಸೇರಿರುತ್ತದೆಂದು ನುಡಿಯುತ್ತಾರೆ. ಸದರಿ ಜಮೀನು ರೆವಿನ್ಯೂ ಪ್ರದೇಶವಾಗಿ ಪರಿವರ್ತನೆಯಾಗಿರುವ ಕಾರಣ ಅದು ಅರಣ್ಯ ಪ್ರದೇಶವಾಗಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಸದರಿ ಜಮೀನು ಡಿನೋಟಿಫೈ ಆಗಿರುವ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. 1959 ರಲ್ಲಿ ಸದರಿ ಸರ್ವೆ ನಂಬರ್ ನ ಜಮೀನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಹಸ್ತಾಂತರವಾಗಿರುವ ವಿಚಾರ ನಮಗೆ ಗೊತ್ತಿದ್ದರೂ ಸಹ ನಾವು ಅದನ್ನು ಗಣನೆಗೆ ತೆಗೆದುಕೊಳ್ಳದೇ 1939 ರ ನೊಟೀಫಿಕೇಶನ್ ನಂತೆ ಸರ್ವೆ ಮಾಡಿರುತ್ತೇವೆಂದರೆ ಸರಿಯಲ್ಲ.

ಸದರಿ ಸಿದ್ದರಬೆಟ್ಟ ಕಿರುಅರಣ್ಯವನ್ನು ಸಂಪೂರ್ಣವಾಗಿ ರೆವಿನ್ಯೂ ಇಲಾಖೆಗೆ ಹಸ್ತಾಂತರವಾಗಿರುವ ಬಗ್ಗೆ ಆದೇಶವಾಗಿದ್ದು, ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-1 ನ್ನು ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಅವರ ಅನುಕೂಲಕ್ಕೆ ತಕ್ಕಂತೆ ತಯಾರು ಮಾಡಿಕೊಟ್ಟಿರುತ್ತೇನೆಂದರೆ ಸರಿಯಲ್ಲ. ಆರೋಪಿಯು ಅರಣ್ಯ ಪ್ರದೇಶಕ್ಕೆ ಸೇರಿದ ಜಾಗದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆಸಿಲ್ಲ ಹಾಗೂ ಕಾನೂನು ಪ್ರಕಾರ ತಮಗೆ ಮಂಜೂರಾದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿರುತ್ತಾರೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಲಯ,
ಕನಕಪುರ